# ಒಂದು ಪೆನ್ನಿನ ಕಥೆ



**ಒಂದು ಪೆನ್ನಿನ ಸ್ವಗತದ ಮೂಲಕ ಬದುಕಿನ ಸಾರ್ಥಕ್ಯದ ಕುರಿತು ಮಾತಾಡುವ ಕಿರುಚಿತ್ರ 'ಮೈ ನೇಮ್ ಈಸ್ ರಾಜು'.**

■ ಗೌರಿ

'ಪಿಆರ್‌ಕೆ ಪ್ರೊಡಕ್ಷನ್ಸ್' ಬ್ಯಾನರ್ ಅಡಿಯಲ್ಲಿ ಸೋಷಿಯಲ್ ಮೀಡಿಯಾದಲ್ಲಿ ಬಿಡುಗಡೆಯಾಗಿರುವ ಕಿರುಚಿತ್ರ 'ಮೈ ನೇಮ್ ಈಸ್ ರಾಜು'. ವಿಭಿನ್ನ ಪರಿಕಲ್ಪನೆ ಮತ್ತು ನವಿರಾದ ನಿರೂಪಣೆಯಿಂದ ಕಿರುಚಿತ್ರ ಗಮನಸೆಳೆಯುತ್ತದೆ. ಸಿನಿಮಾ ಮಾಧ್ಯಮದ ಕುರಿತು ನಿರ್ದೇಶಕರಿಗೆ ಇರುವ ವ್ಯಾಮೋಹವೂ ಈ ಕಿರುಚಿತ್ರದಲ್ಲಿ ಎದ್ದು ಕಾಣುವ ಹಾಗಿದೆ. ಸುಮಂತ್ ಆಚಾರ್ಯ ಈ ಕಿರುಚಿತ್ರವನ್ನು ನಿರ್ದೇಶಿಸಿದ್ದಾರೆ.

ಈ ಕಿರುಚಿತ್ರದ ಕತೆ ಅಂಥ ವಿಶೇಷವಾದದ್ದಲ್ಲ; ಆದರೆ ವಿಭಿನ್ನವಾದದ್ದು. ಮಹತ್ವಾಕಾಂಕ್ಷೆಯ ಪ್ರಯತ್ನವೂ ಇದಲ್ಲ, ಆದರೆ ಸಣ್ಣ ಆಲೋಚನೆಯನ್ನು ಅಚ್ಚುಕಟ್ಟಾಗಿ ದಾಟಿಸುವ ಪ್ರಯತ್ನ. ಸಬ್ ರಿಜಿಸ್ಟ್ರಾರ್ ಆಫೀಸಲ್ಲಿ ನೇತಾಡುವ ಒಂದು ಪೆನ್ನಿನ ಸ್ವಗತದಲ್ಲಿ ಈ ಕಿರುಚಿತ್ರ ನಿರೂಪಿತಗೊಳ್ಳುತ್ತದೆ. ಯಾರು ಯಾರದೋ ಕಾಗದಪತ್ರಗಳಿಗೆ ಸಹಿ ಹಾಕುವುದು, ಅರ್ಜಿ ತುಂಬುವುದರಲ್ಲಿಯೇ ಅರ್ಧ ಜೀವನವನ್ನು ಕಳೆದ ಆ ಪೆನ್ನಿಗೆ ತಾನು ಸಾಯುವುದರ ಒಳಗೆ ಏನಾದರೂ ಒಂದು ಹೆಮ್ಮೆಪಡುವಂಥ ಕೆಲಸ ಮಾಡಬೇಕು ಎಂಬ ಮಹದಾಸೆ ಇದೆ. ಆ ಆಸೆಯಲ್ಲಿ ಕಾಯುತ್ತಿರುವಾಗಲೇ ಒಮ್ಮೆ ಒಂದು ಹುಡುಗಿ ಬಂದು ಆ ಪೆನ್ನನ್ನು ಕೈಗೆತ್ತಿಕೊಳ್ಳುತ್ತಾಳೆ. ಅದರಲ್ಲಿ ಬರೆದ ಎರಡು ಸಾಲಿನಲ್ಲಿಯೇ ಅವಳಿಗೆ ಪೆನ್ನಿನ ಜೊತೆಗೆ ಏನೋ ಒಂದು ಬಾಂಧವ್ಯ ಹುಟ್ಟಿಕೊಳ್ಳುತ್ತದೆ. ಈ ಜಗತ್ತಿನಲ್ಲಿನ ಪ್ರತಿಯೊಂದು ವಸ್ತುವಿಗೂ ಜೀವವಿರುತ್ತದೆ. ಸೂಕ್ಷ್ಮವಾಗಿ ಅವಲೋಕಿಸಿದರೆ ನಮ್ಮ ಅನುಭವಕ್ಕೆ ಬರುತ್ತದೆ ಎಂಬುದು ಅವಳ ನಂಬಿಕೆ. ಅವಳು ಆ ಪೆನ್ನನ್ನು ಕೇಳಿ ತೆಗೆದುಕೊಂಡು ಹೋಗುತ್ತಾಳೆ.

ಇಷ್ಟು ದಿನ ತಲೆಕೆಳಗಾಗಿ ನೇತುಬಿದ್ದು ಉಲ್ಟಾ ಜಗತ್ತನ್ನು ನೋಡುತ್ತಿದ್ದ ಪೆನ್ನಿಗೆ ಹೊಸ ಪ್ರಪಂಚದ ಪರಿಚಯವಾಗುತ್ತದೆ. ಅಲ್ಲಿಂದ ಮುಂದೆ ಏನಾಗುತ್ತದೆ ಎನ್ನುವುದೇ ಕಿರುಚಿತ್ರದ ಕಥೆ.

ಪೆನ್ನಿನ ಕಣ್ಣಿನಿಂದ ಜಗತ್ತನ್ನು ನೋಡುವ ಪರಿಕಲ್ಪನೆಯೇ ವಿಭಿನ್ನವಾಗಿದೆ. ನಿರೂಪಣೆಯಲ್ಲಿನ ತೆಳುವಾದ ಹಾಸ್ಯಧಾಟಿಯೂ ಅದರ ಲವಲವಿಕೆಯನ್ನು ಹೆಚ್ಚಿಸಿದೆ. ಪೆನ್ನಿನ ಹೊರತಾದ ಯಾವ ಪಾತ್ರಗಳನ್ನೂ ಪೂರ್ತಿ ಮುನ್ನಲೆಗೆ ತರದೆ, ಹಿನ್ನೆಲೆಯಲ್ಲಿಯೇ ಅವುಗಳ ಚಿತ್ರ ಕಟ್ಟಿಕೊಡುವ ಕ್ರಮ ಕುತೂಹಲಕಾರಿಯಾಗಿದೆ.

ಕಿರುಚಿತ್ರ ಮಾಧ್ಯಮದ ಕ್ಯಾನ್ವಾಸಿಗೆ ವಿಸ್ತಾರದ ಕಥನಗಳು ಒಗ್ಗುವುದಿಲ್ಲ. ಆ ಕ್ಷಣದಲ್ಲಿ ಏನನ್ನೋ ಹೊಳೆಯಿಸುವ, ಕ್ಷಣಕಾಲ ಭಾವುಕತೆಯಲ್ಲಿ ಮುಳುಗಿಸುವ ಕೆಲಸವನ್ನು ಅದು ಮಾಡುತ್ತದೆ. ಹಾಗೆ ಆಗಬೇಕಾದರೆ ಆ ಮಾಧ್ಯಮಕ್ಕೆ ಹೊಂದುವ ಕಥೆಯನ್ನು ಆಯ್ದುಕೊಳ್ಳಬೇಕು. ಈ ನಿರ್ದೇಶಕರಿಗೆ ಆ ಜಾಣ್ಮೆ ಇದೆ. ಹಾಗಾಗಿಯೇ ಪೆನ್ನಿನ ಕಥೆ ಹೇಳುತ್ತಲೂ ಅದನ್ನು ಎಲ್ಲಿಗೋ ವಿಸ್ತರಿಸುವುದಿಲ್ಲ. ಅದರ ವರ್ತಮಾನದ ಬದುಕನ್ನು ಹೇಳುತ್ತ, ಬಯಕೆಯನ್ನು ಅರುಹುತ್ತ ಅದು ಈಡೇರುವುದನ್ನು ಕಾಣಿಸುವ ಸಣ್ಣ ಕ್ಯಾನ್ವಾಸಿನಲ್ಲೇ ಕಥೆ ಒರೆದಿದ್ದಾರೆ. ಕೊನೆಯಲ್ಲಿ ಆ ಪೆನ್ನಿನ ಬದುಕನ್ನು ಮನುಷ್ಯನ ಬದುಕಿನ ಜೊತೆಗೆ ಸಮೀಕರಿಸುವ ಕೆಲಸವನ್ನೂ ಮಾಡಿದ್ದಾರೆ.

ಸಿನಿಮಾ ಮಾಧ್ಯಮದ ಮೇಲಿನ ಅವರ ಹಿಡಿತ ಪ್ರತಿ ಫ್ರೇಮ್‌ನಲ್ಲಿಯೂ ಕಾಣಿಸುತ್ತದೆ. ಅದಕ್ಕೆ ಬೆನ್ನೆಲುಬಾಗಿ ಬರವಣಿಗೆ ಇದೆ. ಕೆಲವು ಕಡೆಗಳಲ್ಲಿ ಮಾತು ತುಸು ಹೆಚ್ಚಾದಂತೆ ಭಾಸವಾದರೂ ಈ ನಿರೂಪಣೆಯ ತಂತ್ರಕ್ಕೆ ಅದು ಅನಿವಾರ್ಯ.

ಆದರೆ ಇದೇ ಹಿಡಿತವನ್ನು ಪೂರ್ಣಪ್ರಮಾಣದ ಸಿನಿಮಾದಲ್ಲಿ ಇರಿಸಿಕೊಳ್ಳುವುದು ಬಹುದೊಡ್ಡ ಸವಾಲು. ಈಗಾಗಲೇ ಪೂರ್ಣಪ್ರಮಾಣದ ಸಿನಿಮಾ ಮಾಡುವ ಸಿದ್ಧತೆಯಲ್ಲಿರುವ ಸುಮಂತ್ ಅವರ ಕುರಿತು ಒಂದಿಷ್ಟು ನಿರೀಕ್ಷೆಯನ್ನಂತೂ ಈ ಕಿರುಚಿತ್ರ ಹುಟ್ಟುಹಾಕುತ್ತದೆ. ಆ ನಿರೀಕ್ಷೆಯನ್ನು ಅವರು ಎಷ್ಟರಮಟ್ಟಿಗೆ ನಿಜವಾಗಿಸುತ್ತಾರೆ ಎಂದು ನೋಡಬೇಕಷ್ಟೆ.



**ಹೆಸರು:** ಮೈ ನೇಮ್ ಈಸ್ ರಾಜು
**ನಿರ್ದೇಶನ:** ಸುಮಂತ್ ಆಚಾರ್ಯ
**ನಿರ್ಮಾಣ:** ಹರೀಶ್, ನವೀನ್, ರೋಹಿತ್
**ನಿರೂಪಣೆ:** ಸುನೀಲ್ ರಾವ್
**ಸಂಗೀತ:** ಗಿರೀಶ್ ಹೊತ್ತೂರ್, ಅನೂಪ್ ಜಾಕೋಬ್
**ಛಾಯಾಗ್ರಹಣ/ ಸಂಕಲನ:** ಸುಮಂತ್ ಆಚಾರ್ಯ

ಈ ಕಿರುಚಿತ್ರ ವೀಕ್ಷಣೆಗೆ bit.ly/3lVhtrN ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.